ಭೂ ಸ್ವಾಧೀನ ಪಡಿಸಿಕೊಳ್ಳುವುದು

221(235); ಡಾ.ರಫೀಕ್ ಅಹ್ಮದ್ ಎಸ್. (ತುಮಕೂರು ನಗರ)

ಅ) ರೈಲ್ವೇ ಇಲಾಖೆ ವತಿಯಿಂದ ತುಮಕೂರು –ದಾವಣಗೆರೆ ಮತ್ತು – ತುಮಕೂರು–ರಾಯದುರ್ಗ ರೈಲ್ವೇ ಕಾಮಗಾರಿಗೆ ಸರ್ವೇ ಕಾರ್ಯ ಕೈಗೊಳ್ಳಲು ಭೂಸ್ವಾಧೀನ ಪಡಿಸಿಕೊಂಡು ಕಾಮಗಾರಿ ಪ್ರಾರಂಭಿಸಲು ಕಾಲಮಿತಿ ಏನು;

ಆ) ಭೂಸ್ವಾಧೀನ ಪರಿಹಾರ ಹಣದ ಮೊತ್ತ ಎಷ್ಟು ಹಾಗೂ ಭೂಸ್ವಾಧೀನ ಪ್ರಕ್ರಿಯೆಯು ಯಾವ ಹಂತದಲ್ಲಿದೆ?

ಶ್ರೀ. ವಿ ಶ್ರೀನಿವಾಸ್ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ತುಮಕೂರು – ರಾಯದುರ್ಗ ರೈಲ್ವೇ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ಈಗಾಗಲೆ ಭೂ ಸ್ವಾಧೀನವಾಗಿ ರೈಲ್ವೆಗೆ ಹಸ್ತಾಂತರಿಸಲಾಗಿರುವ ಸ್ಥಳದಲ್ಲಿ ರೈಲು ಮಾರ್ಗ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದೆ.

ತುಮಕೂರು– ದಾವಣಗೆರೆ ಹೊಸ ರೈಲು ಮಾರ್ಗದ ಭೂಸ್ವಾಧೀನ ಪ್ರಕ್ರಿಯೆಯು ಪ್ರಾರಂಭಿಕ ಹಂತದಲ್ಲಿದ್ದು ಭೂಮಿಯನ್ನು ನೈರುತ್ಯ ರೈಲ್ವೆಗೆ ಹಸ್ತಾಂತರಿಸಿದ ನಂತರ ನೈರುತ್ಯ ರೈಲ್ವೆಯಿಂದ ಕಾಮಗಾರಿ ಯನ್ನು ಪ್ರಾರಂಭಿಸಬಹುದಾಗಿದೆ.

ಈ ಯೋಜನೆಗಳಿಗೆ ಯಾವುದೇ ಕಾಲಮಿತಿ ನಿಗದಿಪಡಿಸಿರುವುದಿಲ್ಲ.

ಆ) ಈ ಯೋಜನೆಗಳ ಭೂಸ್ವಾಧೀನ ಪ್ರಕ್ರಿಯೆಯು ಪ್ರಾಥಮಿಕ ಹಂತದಲ್ಲಿ ರುವುದರಿಂದ ಪರಿಹಾರ ಮೊತ್ತದ ಕುರಿತು ನಂತರ ನಿರ್ಧರಿಸಲಾ ಗುವುದು.